ಸಿ. ಸಿ. ನಂ.- **252/21**

ಡಿ. ಡಬ್ಲ್ಯೂ- **1**

1 ನೇ ಅಪರ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ 24-11-2025 ರಂದು ಪ್ರಾಮಾಣೀಕರಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ- ಆರೋಪಿ ಪರ ಶ್ರೀ ಕೆ ಎಸ್ ಎನ್ ವಕೀಲರಿಂದ -

ದಿಃ14.03.2024 ರ ನೋಟೀಸ್ ಹಾಜರುಪಡಿಸಿದ್ದು, ಅದನ್ನು ನಿಡಿ-4 ಎಂದು ಗುರುತಿಸಲಾಯಿತು. ದಿಃ 23.03.2024 ರ ನೋಟೀಸ್ ನ ಕಛೇರಿ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಡಿ-5 ಎಂದು ಗುರುತಿಸಲಾಯಿತು. ಅಂಚೆ ಸ್ವೀಕೃತಿ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಡಿ-6 ಎಂದು ಗುರುತಿಸಲಾಯಿತು. ಓ ಎಸ್ ನಂ.32ಃ2024 ರ ವಾದ ಪತ್ರ ಹಾಗೂ ಸದರಿ ವಾದ ಪತ್ರದ ಜೊತೆ ಕಳುಹಿಸಿದ ನ್ಯಾಯಾಲಯದ ಸಮನ್ಸ ಹಾಜರುಪಡಿಸಿದ್ದು, ಅವುಗಳನ್ನು ಅನುಕ್ರಮವಾಗಿ ನಿಡಿ-7 ಮತ್ತು 8 ಎಂದು ಗುರುತಿಸಲಾಯಿತು. ಸಿಸಿ ನಂ.2170ಃ2021 ರಲ್ಲಿ ದೂರುದಾರರ ಪಾಟೀ ಸವಾಲಿನ ದೃಡೀಕೃತ ನಕಲು ಹಾಜರುಪಡಿಸಿದ್ದು, ಅದನ್ನು ನಿಡಿ-9 ಎಂದು ಗುರುತಿಸಲಾಯಿತು.

ಪಾಟೀ ಸವಾಲು - ದೂರುದಾರರಿಂದ -

ನಿಡಿ-4 ರಂತೆ ನಾನು ದೂರುದಾರರಿಂದ ನೋಟೀಸ್ ಪಡೆದಿದ್ದೆ. ಈ ನೋಟೀಸನಲ್ಲಿರುವ ಆಸ್ತಿಯಲ್ಲಿ ಮನೆ ಖರೀದಿಸಲು ನನಗೆ ಆಗ ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿ. ಆ ಮನೆ ಖರೀದಿ ಮಾಡಲು ದೂರುದಾರರಿಂದ ಹಣ ಕೇಳಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ದೂರುದಾರರಿಂದ ರೂ.11,66,600.00 ಮೊತ್ತವನ್ನು ಪಡೆದು, ಅವರ ಪರವಾಗಿ ಕ್ರಯ ಕರಾರು ಪತ್ರ ಬರೆದುಕೊಟ್ಟಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಬ್ಯಾಂಕ್ ನಲ್ಲಿ ನನ್ನ ಬಗ್ಗೆ ಒಳ್ಳೆಯ ರೆಕಾರ್ಡ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಆ ಸಮಯದಲ್ಲಿ ನನಗೆ ಸಾಲ ಸಹ ಮಂಜೂರು ಆಗಿತ್ತು ಎಂದು ನುಡಿಯುತ್ತಾರೆ. ದೂರುದಾರರಿಂದ ಮಾತುಕತೆ ಮಾಡಿಕೊಂಡು ಕಾರ್ಪೋರೇಷನ್ ಬ್ಯಾಂಕ್ ನಲ್ಲಿ ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ನಾನು ಬ್ಯಾಂಕ್ ನಲ್ಲಿ ಒಳ್ಳೆಯ ರೆಕಾರ್ಡ ಮೇಂಟೇನ್ ಮಾಡಲು ಈ ರೀತಿ ಕಾರ್ಪೋರೇಷನ್ ಬ್ಯಾಂಕ್ ನಿಂದ ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ಸದರಿ ಬ್ಯಾಂಕಿನಲ್ಲಿ ನಾನು ಖಾತೆ ತೆರೆದ ಒಂದು ತಿಂಗಳ ನಂತರ

ಸಿ. ಸಿ. ನಂ.- 252/21

ಡಿ. ಡಬ್ಲ್ಯೂ- 1

ಸಾಲ ಪಡೆದಿದ್ದೆ ಎಂದರೆ ಸಾಕ್ಷಿ ಹೌಸಿಂಗ್ ಸಾಲ ಪಡೆದಿದ್ದೆ ಎಂದು ನುಡಿಯುತ್ತಾರೆ. ಅಲ್ಲಿ ಒಳ್ಳೆಯ ರೆಕಾರ್ಡ್ ಪಡೆದ ನಂತರ ನಾನು ಆ ಬ್ಯಾಂಕಿನಿಂದ ಸಾಕಷ್ಟು ಸಾಲ ಪಡೆದಿದ್ದೆ ಎಂದರೆ ಸರಿ. ನಿಡಿ-4 ನೋಟೀಸ್ ಗೆ ನಿಡಿ-5 ರಂತೆ ಪ್ರತ್ಯುತ್ತರ ಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ಪ್ರತ್ಯುತ್ತರದಲ್ಲಿ ಬರೆದ ಮಾಹಿತಿ ಬಗ್ಗೆ ನಾನು ಮುಖ್ಯ ವಿಚಾರಣೆಯಲ್ಲಿ ಸಾಕ್ಷ್ಯ ನುಡಿದಿಲ್ಲ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಮುಖ್ಯವಿಚಾರಣೆಯಲ್ಲಿ ಸಾಕ್ಷ್ಯ ನುಡಿಯಲು ತೊಂದರೆ ಇರಲಿಲ್ಲ ಎಂದರೆ ಸರಿ. ಸದರಿ ಪ್ರತ್ಯುತ್ತರ ನೀಡಲು ನಾನು ವಕೀಲರಿಗೆ ಮಾಹಿತಿ ಕೊಟ್ಟಿಲ್ಲ. ನಿಡಿ-8 ಸಮನ್ಸ ನ್ನು ಮಾನ್ಯ ನ್ಯಾಯಾಲಯದಿಂದ ಪಡೆದ ನಂತರ ಸುಮಾರು ಒಂದು ವರ್ಷವರೆಗೂ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ನಿಡಿ-9 ಎಂದು ಗುರುತಾದ ದಿನಾಂಕ 31.07.2024 ರ ದೂರುದಾರರ ಪಾಟೀ ಸವಾಲಿನಲ್ಲಿ ನಿಡಿ-4 ನೋಟೀಸನಲ್ಲಿ ಇರುವ ಕ್ರಯ ಕರಾರು ಪತ್ರದ ಬಗ್ಗೆ ದೂರುದಾರರಿಗೆ ಪ್ರಶ್ನೆ ಕೇಳಲಾಗಿದೆ ಎಂದರೆ ಸರಿ. ನಿಡಿ-4 ನೋಟೀಸನಲ್ಲಿರುವ ವ್ಯವಹಾರ ಹಾಗೂ ಪ್ರಸ್ತುತ ಪ್ರಕರಣದ ವ್ಯವಹಾರ ಎರಡೂ ಬೇರೆ ಬೇರೆ ಎಂದರೆ ಸರಿಯಲ್ಲ. ಸದರಿ ಎರಡು ವ್ಯವಹಾರಗಳು ಬೇರೆ ಬೇರೆ ಇದ್ದರೂ ಸಹ ನಾನು ಈ ಪ್ರಕರಣದ ವಿಲೇವಾರಿಯಲ್ಲಿ ವಿಳಂಬ ಮಾಡಲು ಈ ದಾಖಲೆಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ರೀತಿ ಸಂಬಂಧ ಇರದ ದಾಖಲೆಗಳನ್ನು ಹಾಜರುಪಡಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಸಹಿ-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ, ಹೊಸಪೇಟೆ.